ಓ.ಎಸ್. 330/2018
ಪಿ.ಡಬ್ಲ್ಯೂ-1

ದಿನಾಂಕಃ **19.11.2025**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಪಿ.ಸಿ.ಕೆ.ಆರ್. ವಕೀಲರಿಂದಃ

ದಾವಾ ಸ್ವತ್ತು ನಮಗೆ 2003 ರಲ್ಲಿ ಮಂಜೂರಾಗಿರುತ್ತದೆ. ದಾವಾ ಸ್ವತ್ತನ್ನು ನಮಗೆ ಉಚಿತವಾಗಿ ಮಂಜೂರು ಮಾಡಿರುತ್ತಾರೆ. ಮಂಜೂರಾತಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಮಂಜೂರಾತಿ ಪತ್ರವನ್ನು ತಾಲ್ಲೂಕು ಪಂಚಾಯ್ತಿಯ ಇ.ಓ.ರವರು ನೀಡಿರುತ್ತಾರೆ. ನಮ್ಮ ಭಕ್ತರಹಳ್ಳಿ ಗ್ರಾಮ ಮರುವೇಕೆರೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿರುತ್ತದೆ. ದಾವಾ ಸ್ವತ್ತು ನನ್ನ ತಂದೆಗೆ ಮಂಜೂರಾಗಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

**2.** ಮಂಜೂರಾತಿ ಪತ್ರದಲ್ಲಿ ದಾವಾ ಸ್ವತ್ತಿನ ಪೂರ್ವಕ್ಕೆನಾಗಮ್ಮನ ಜಮೀನು, ಪಶ್ಚಿಮಕ್ಕೆ-ಈರಣ್ಣನವರ ಖಾಲಿ ನಿವೇಶನ, ಉತ್ತರಕ್ಕೆ-ರಂಗಮ್ಮನವರ ಮನೆ, ದಕ್ಷಿಣಕ್ಕೆ-ಶಾಂತಪ್ಪನವರ ಮನೆ ಇರುತ್ತದೆ ಎಂದು ನಮೂದು ಮಾಡಿರುತ್ತಾರೆ. ಮೇಲಿನ ಚಕ್ಕುಬಂಧಿಯನ್ನು ನಮೂದು ಮಾಡಿ ನಮಗೆ ಮಂಜೂರಾತಿ ಪತ್ರ ನೀಡಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಈರಣ್ಣನವರಿಂದ ದಿಃ14.08.2010 ರಂದು ಈರಮ್ಮನವರು ಪೂರ್ವ ಪಶ್ಚಿಮ -30 ಅಡಿ , ಉತ್ತರ-ದಕ್ಷಿಣ 40 ಅಡಿ ನಿವೇಶನ ಖರೀದಿ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

**3.** ವಾದ ಪತ್ರದೊಂದಿಗೆ ಹಾಜರು ಪಡಿಸಿರುವ ನಕಾಶೆ ವಾಸ್ತವಿಕತೆಗೆ ವಿರುದ್ಧವಾಗಿ ಊಹೆಯ ಮೇರೆಗೆ ನಮೂದು ಮಾಡಿಸಿ ಹಾಜರು ಪಡಿಸಿರುತ್ತೇವೆ ಎಂದು ಸೂಚಿಸುವುದು

ಸರಿಯಲ್ಲ. ವಾದ ಪತ್ರದೊಂದಿಗೆ ಹಾಜರು ಪಡಿಸಿರುವಂತಹ ನಕಾಶೆಯಲ್ಲಿ ತೋರಿಸಿರುವಂತಹ ಮುಖ್ಯ ರಸ್ತೆಯಿಂದ ದಾವಾ ಸ್ವತ್ತಿಗೆ ತೋರಿಸಿರುವಂತಹ ರಸ್ತೆ ಅಸ್ತಿತ್ವದಲ್ಲಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

**4.** ರಂಗಮ್ಮನ ಮನೆಯ ಉತ್ತರಕ್ಕೆ ಇನ್ನೊಂದು ರಸ್ತೆ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಗ್ರಾಮದ ಮಧ್ಯದಿಂದ ಅಂಗನವಾಡಿ ಶಾಲೆಗೆ ಹೋಗುವಂತಹ ರಸ್ತೆ ರಂಗಮ್ಮನ ಮನೆಯ ಉತ್ತರ ದಿಕ್ಕಿನಲ್ಲಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಪಶ್ಚಿಮ ದಿಕ್ಕಿನಲ್ಲಿರುತ್ತದೆ ಎಂದು ಉತ್ತರಿಸಿರುತ್ತಾರೆ. ರಂಗಮ್ಮನ ಮನೆಯ ಪಶ್ಚಿಮ ದಿಕ್ಕಿನಲ್ಲಿ ನಮ್ಮ ಮನೆಗೆ ಹೋಗಲು 10 ಅಡಿ ಅಗಲದ ದಾರಿ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ರಂಗಮ್ಮನ ಮನೆಯ ಪಶ್ಚಿಮ ದಿಕ್ಕಿನಲ್ಲಿ ಪೆಟ್ಟಿಗೆ ಅಂಗಡಿ ಇರುತ್ತದೆ ಎಂದರೆ ಸರಿ. ರಂಗಮ್ಮನವರ ಮನೆಯ ಪಶ್ಚಿಮ ದಿಕ್ಕಿನಲ್ಲಿರುವಂತಹ ಪೆಟ್ಟಿಗೆ ಅಂಗಡಿಯನ್ನು ನಾವೇ ಇಟ್ಟಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ಈ ದಾವೆಯನ್ನು ಹೂಡಿದ ನಂತರ ನಾವೇ ರಂಗಮ್ಮನವರ ಮನೆಯ ಪಶ್ಚಿಮಕ್ಕೆ ಪೆಟ್ಟಿಗೆ ಅಂಗಡಿ ಮತ್ತು ಅಳಿ ಕುಳಿತುಕೊಳ್ಳಲು ಕಲ್ಲುಗಳಿಂದ ಜಗಲಿ ಮಾಡಿಸಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ರಂಗಮ್ಮನವರು ಅವರ ಜಾಗದಲ್ಲಿ ಅವರು ಮಾಡಿಕೊಂಡಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಪೆಟ್ಟಿಗೆ ಅಂಗಡಿ ಇಟ್ಟಿರುವ ಹತ್ತಿರ ಮೊದಲು ಒಂದು ಮರ ಇದ್ದು ಅದನ್ನು ನೀವೇ ಕಡಿಸಿ ಅಲ್ಲಿ ಪೆಟ್ಟಿಗೆ ಅಂಗಡಿ ಇಟ್ಟಿಸುತ್ತೀರಾ ಎಂದು ಸೂಚಿಸುವುದು ಸರಿಯಲ್ಲ.

**5.** ರಂಗಮ್ಮನವರ ಮನೆಯ ಬಾಗಿಲು ಪಶ್ಚಿಮ ದಿಕ್ಕಿಗೆ ಇರುತ್ತದೆ ಎಂದರೆ ಸರಿ. ರಂಗಮ್ಮನ ಮನೆಯ ಪಶ್ಚಿಮ ದಿಕ್ಕಿನಲ್ಲಿರುವ ದಾರಿಯಲ್ಲಿ ನಾವು ನಮ್ಮ ಮನೆಗೆ ಹೋಗಲು

ತಿರುಗಾಡುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ನಮ್ಮ ಮನೆಗೆ ಉತ್ತರ ದಿಕ್ಕಿಗೆ ಬಾಗಿಲು ಇರುತ್ತದೆ ಎಂದರೆ ಸರಿ. ನಿಮ್ಮ ಮನೆ ಶೀಟಿನ ಮನೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ನಮ್ಮ ಮನೆ ಸ್ವಲ್ಪ ಮೋಲ್ಡ್ ಹಾಕಿರುತ್ತೇವೆ ಸ್ವಲ್ಪ ಶೀಟಿನಿಂದ ಕಟ್ಟಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ನಮ್ಮ ಮನೆಯ ಮೇಲೆ ಹೋಗಲು ಉತ್ತರ ದಿಕ್ಕಿನಲ್ಲಿ ಮೆಟ್ಟಿಲನ್ನು ಕಟ್ಟಿರುತ್ತೇವೆ ಎಂದರೆ ಸರಿ. ನಮ್ಮ ಮನೆಗೆ ತಿರುಗಾಡುವ ಸ್ಥಳದಲ್ಲಿ ಕಲ್ಲು ಬಂಡೆಗಳನ್ನು ಹಾಕಿಕೊಂಡಿರುತ್ತೇವೆ ಎಂದರೆ ಸರಿ.

**6.** ರಂಗಮ್ಮನವರ ಮನೆಯ ಪಶ್ಚಿಮ ದಿಕ್ಕಿನಲ್ಲಿರುವ ಪೆಟ್ಟಿಗೆ ಅಂಗಡಿಯ ಹತ್ತಿರದಿಂದ ನಮ್ಮ ಮನೆಯವರೆಗೂ ತಿರುಗಾಡಲು ನಾವು ಕಲ್ಲು ಬಂಡೆಗಳನ್ನು ಹಾಕಿಕೊಂಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ರಂಗಮ್ಮನ ಮನೆಯ ಉತ್ತರಕ್ಕೆ ಚರಂಡಿ ಇರುತ್ತದೆ ಎಂದರೆ ಸರಿ. ರಂಗಮ್ಮ ಮನೆಯ ಪಶ್ಚಿಮ ದಿಕ್ಕಿನಲ್ಲಿ ಪೆಟ್ಟಿಗೆ ಅಂಗಡಿ ಇಟ್ಟ ನಂತರ ಚರಂಡಿಯ ಮೇಲೆ ಕಲ್ಲುಗಳನ್ನು ಹಾಕಿಕೊಂಡು ತಿರುಗಾಡುತ್ತಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ರಂಗಮ್ಮನ ಮನೆಯ ಉತ್ತರ ದಿಕ್ಕಿನಲ್ಲಿ ಸಿಮೆಂಟ್ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ಸಿಮೆಂಟ್ ರಸ್ತೆ ಮತ್ತು ಚರಂಡಿಯ ಮೇಲೆ ಕಲ್ಲು ಬಂಡೆಗಳನ್ನು ಹಾಕಿಕೊಂಡು ನಾವು ತಿರುಗಾಡುತ್ತಿರುತ್ತೇವೆ ಎಂದರೆ ಸರಿ.

**7.** ಈ ಹಂತದಲ್ಲಿ ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಿ ಸದರಿ ಭಾವಚಿತ್ರದಲ್ಲಿ ಕಾಣುವ ಬಿಳಿ ಬಣ್ಣದ್ದು ನಿಮ್ಮ ಮನೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಅದನ್ನು ಒಪ್ಪಿದ್ದರಿಂದ ಸದರಿ ಭಾವಚಿತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ಕಾಣುವಂತಹ ಪೆಟ್ಟಿಗೆ ಅಂಗಡಿ ಇಡುವ ಪೂರ್ವದಲ್ಲಿ ಸದರಿ ಸ್ಥಳದಲ್ಲಿ ನಾವು ನಮ್ಮ ಮನೆಗೆ ತಿರುಗಾಡುತ್ತಿದ್ದೆವು ಎಂದು ಸೂಚಿಸುವುದು ಸರಿಯಲ್ಲ. ವಾದ ಪತ್ರದೊಂದಿಗೆ ಹಾಜರು ಪಡಿಸಿರುವಂತಹ ಕಚ್ಚಾ

ನಕಾಶೆಯಲ್ಲಿ ತೋರಿಸಿರುವಂತಹ ಪ್ರತಿವಾದಿಯ ಕಟ್ಟಡದ ಉತ್ತರ ದಿಕ್ಕಿನಲ್ಲಿರುವಂತಹ ಸ್ವತ್ತು ಗ್ರಾಮ ಠಾಣಾ ಸ್ವತ್ತಾಗಿರುತ್ತದೆ ಎಂದರೆ ಸರಿ. ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ವಾದ ಪತ್ರದೊಂದಿಗೆ ಹಾಜರು ಪಡಿಸಿರುವ ನಕಾಶೆಯಲ್ಲಿ ತೋರಿಸಿರುವಂತಹ ರಸ್ತೆಯನ್ನು ಊಹೆ ಮಾಡಿಕೊಂಡು ಪ್ರತಿವಾದಿಗಳಿಗೆ ತೊಂದರೆ ಕೊಡುತ್ತಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ.

**8.** ರಂಗಮ್ಮನ ಮನೆಯ ಮುಂದೆ ತಿರುಗಾಡಲು ನಮಗೆ ಯಾರೂ ತೊಂದರೆ ನೀಡದೇ ಇದ್ದರೂ ಸಹ ನಾವೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ಪ್ರತಿವಾದಿಗಳು ನಮ್ಮ ಮನೆಗೆ ತಿರುಗಾಡಲು ನಮಗೆ ಯಾವುದೇ ತೊಂದರೆವುಂಟು ಮಾಡಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಪ್ರತಿವಾದಿಗೆ ಸೇರಿದ ಸ್ವತ್ತಿನಲ್ಲಿ ಅವರು ಸುತ್ತುಗೋಡೆ ಕಟ್ಟಿಕೊಂಡರೆ ನಮಗೆ ಯಾವುದೇ ತೊಂದರೆಯಾಗುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ.

**9.** ನಿಡಿ-1 ರಲ್ಲಿ ಕಾಣುವಂತಹ ಬಿಳಿ ಬಣ್ಣದ ಮನೆಯ ಪಕ್ಕದಲ್ಲಿ ಇರುವಂತಹ ಶೀಟಿನಿಂದ ನಿರ್ಮಾಣ ಮಾಡಿರುವ ಶೆಡ್ ಪ್ರತಿವಾದಿಗೆ ಸೇರಿರುತ್ತದೆ. ನಿಡಿ-1 ರಲ್ಲಿ ಕಾಣುವಂತಹ ಶೀಟಿನ ಶೆಡ್‌ನ ಉತ್ತರಕ್ಕೆ ಪ್ರತಿವಾದಿಗೆ ಸೇರಿದಂತಹ ಖಾಲಿ ಜಾಗ ಇರುತ್ತದೆ ಎಂದರೆ ಸರಿ. ವಾಸ್ತವಿಕ ಅಂಶಗಳನ್ನು ಮರೆಮಾಚಿ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ರಾಜಕೀಯ ದ್ವೇಷದಿಂದ ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತು ನನಗೆ ಮಂಜೂರಾಗದೇ

ಇದ್ದರೂ ಸಹ ಕಾನೂನು ಬಾಹಿರವಾಗಿ ಮನೆ ಕಟ್ಟಿಕೊಂಡಿರುತ್ತೇನೆ ಎಂದು ಸೂಚಿಸುವುದು ಸರಿಯಲ್ಲ. ನಾವು ಪಂಚಾಯ್ತಿ ಅಧಿಕಾರಿಗಳೊಂದಿಗೆ ಶಾಮೀಲಾಗಿ ಅವರಿಗೆ ಹಣ ನೀಡಿ ಖಾತೆ ಮಾಡಿಸಿಕೊಂಡಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ.

**10.** ಪ್ರತಿವಾದಿಗಳು ನಮಗೆ ತಿರುಗಾಡಲು ಯಾವುದೇ ತೊಂದರೆ ನೀಡದೇ ಇದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ